

ಯಾವುದೇ ಕ್ಷಣದಲ್ಲಿ ವಿಮಾನ ಆಕಾಶಕ್ಕೆ ಚಿಮ್ಮಲು ಸಿದ್ಧವಾಗಿತ್ತು. ಆ ಕ್ಷಣ, ನನ್ನ ಮನಸ್ಸಿಗೆ ಕೂಡ ರೆಕ್ಕೆಗಳು ಮೂಡಿದ್ದವು. ತುಮಕೂರಿನ ಹಳ್ಳಿ ಸತ್ಯಮಂಗಲದಲ್ಲಿ ಬೆಳೆದ ನನಗೆ ಆಗಸದಲ್ಲಿ ವಿಮಾನಗಳು ಹಾರಾಡುವಾಗ ಅವುಗಳನ್ನು ನೋಡಿ ನೆಗೆನೆಗೆದು ವಿಮಾನಕ್ಕೆ ಟಾಟ ಮಾಡಿ ಖುಷಿಪಟ್ಟ ದಿನಗಳು ನೆನಪಿಗೆ ಬಂದವು. ಸತ್ಯಮಂಗಲದ ನನ್ನ ಹಟ್ಟಿಯಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ಬಂದಾಗ ನನ್ನ ನೆಲೆ, ನಾನು ಬೆಳೆದ ಕನ್ನಡದ ಬೆಲೆ ಅರ್ಥವಾಗಿತ್ತು.

ಮೋಡಗಳ ಸೀಳಿದ ಲೋಹದ ಹಕ್ಕಿ ಮೂವತ್ತೆರಡು ಸಾವಿರ ಮೀಟರ್ ಎತ್ತರದಲ್ಲಿ ಹಾರುತ್ತಿದೆ. ಸುಮಾರು ಎರಡೂವರೆ ಗಂಟೆಗಳ ಪ್ರಯಾಣ ಮುಗಿದದ್ದು ಗೊತ್ತಾಗಲೇ ಇಲ್ಲ. ಗುವಾಹಟಿಯ ವಿಮಾನ ನಿಲ್ದಾಣದಲ್ಲಿ ವಿಮಾನ ಇಳಿದಾಗ ಸಂಜೆ ಐದಾಗಿತ್ತು. ಅಲ್ಲಿ ಆಗಲೇ ಕತ್ತಲು! ದಟ್ಟ ಮಂಜಿನ ನಡುವೆ ರಾತ್ರಿ ಹಿತವಾಗಿ ಕಂಪಿಸುತ್ತಿರುವಂತೆ ಭಾಸವಾಯಿತು. ಹೋಟೆಲ್‌ಗೆ ಹೋಗುವ ದಾರಿಯಲ್ಲಿ ಅಸ್ಸಾಮಿನ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಟ್ಯಾಕ್ಸಿ ಚಾಲಕನನ್ನು ವಿಚಾರಿಸಿದೆ.

ನಾನು ಗುವಾಹಟಿಗೆ ಹೋಗಿದ್ದುದು ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹು ಭಾಷಾ ಕವಿಗೋಷ್ಠಿಯೊಂದರಲ್ಲಿ ಭಾಗವಹಿಸಲು. ಕಾವ್ಯಕ್ಷಣಗಳೊಂದಿಗೆ ಅಸ್ಸಾಂನ ಪರಿಸರ ಹಾಗೂ ಜನಜೀವನವನ್ನು ಪರಿಚಯಿಸಿಕೊಳ್ಳುವ ಹಂಬಲ.

ಇಡೀ ಗುವಾಹಟಿಯು ಬೆಟ್ಟದೊಳಗಿನ ನಗರ. ನಾವು ಉಳಿದುಕೊಂಡಿದ್ದ ಫ್ಯಾನ್ಸಿಬಜಾರಿನಿಂದ ಬಲಗಡೆಯಲ್ಲಿ ಹತ್ತು ಹೆಜ್ಜೆ ದೂರದಲ್ಲಿ ಬ್ರಹ್ಮಪುತ್ರ ನದಿ! ಈ ನದಿ ಗುವಾಹಟಿಯನ್ನು ಉತ್ತರ ಗುವಾಹಟಿ ಮತ್ತು ದಕ್ಷಿಣ ಗುವಾಹಟಿಯೆಂದು ಇಬ್ಭಾಗ ಮಾಡುತ್ತದೆ. ನದಿಯ ಹರಹು ಸುಮಾರು ನಾಲ್ಕು ಕಿಲೋಮೀಟರ್ ಇದೆ. ದಕ್ಷಿಣವು ನಗರವಾದರೆ, ಉತ್ತರವು ಹಳ್ಳಿಗಳಿಂದ ಕೂಡಿದೆ. ದಕ್ಷಿಣದಿಂದ ಉತ್ತರಕ್ಕೆ ದಾಟಲು ಸರ್ಕಾರವು ಲಾಂಚ್ ವ್ಯವಸ್ಥೆ ಮಾಡಿದೆ. ದ್ವಿಚಕ್ರವಾಹನಗಳ ಜೊತೆ ಲಾಂಚ್‌ನಲ್ಲಿ ಜನ ಪ್ರಯಾಣ ಮಾಡುವುದು ಸಾಮಾನ್ಯ. ಗುವಾಹಟಿಯನ್ನು ಬಳಸಿಕೊಂಡು ಬರುವುದು 16 ಕಿ.ಮೀ. ದಾರಿಯಾದುದರಿಂದ 15–20 ನಿಮಿಷದ ಲಾಂಜ್ ಪ್ರಯಾಣಕ್ಕೆ ಅವರು ಒಗ್ಗಿಕೊಂಡಿದ್ದಾರೆ. ದಕ್ಷಿಣದಿಂದ ಉತ್ತರಕ್ಕೆ ದಾಟಲು ಎರಡೂವರೆ ರೂಪಾಯಿ ಟಿಕೇಟು.

ಯಾರೂ ಇಲ್ಲದವರಿಗೆ ಪ್ರಕೃತಿಯೇ ತಾಯಿ ಎಂಬ ಮಾತಿನಂತೆ ನದಿಯ ದಡದಲ್ಲಿ ಆ ಚಳಿಯಲ್ಲೂ, ಕೆಲವರು ಕೊಳಚೆ ಬೆರೆತ ನೀರಿನಲ್ಲಿ ಸ್ನಾನ ಮಾಡಿ ಬಟ್ಟೆಗಳನ್ನು ಒಣಗಿಸಿಕೊಳ್ಳುತ್ತಿದ್ದರು. ಲಾಂಚಿನಲ್ಲಿ ಈ ದಡದಿಂದ ಆ ದಡಕ್ಕೆ ಹೊರಟವನು ಅಸ್ಸಾಮಿ ಭಾಷೆಯ ಕಿವಿಗಡಚಿಕ್ಕುವ ಮೊರೆತದಲ್ಲಿ ನದಿಯ ಮೋಹಕ ವಾಹಿನಿಯನ್ನು ನೋಡಿ ಪುಳಕಗೊಂಡೆ. ಆ ದಡದಲ್ಲಿ ಇಳಿದು ಮತ್ತೆ ಲಾಂಚ್ ಬರುವವರೆಗೂ ಕಾದು ಮತ್ತೆ ಈ ದಡಕ್ಕೆ ಬಂದೆವು.

ನದಿ ವಿಹಾರದ ನಂತರ ಐತಿಹಾಸಿಕ ಮಹತ್ವವುಳ್ಳ ಕಾಮಾಕ್ಯದೇವಿ ಮಂದಿರಕ್ಕೆ ಹೊರಟೆವು. ನಮ್ಮ ಮೈಸೂರಿನ ಚಾಮುಂಡಿ ಬೆಟ್ಟ ಹೋಲುವಂತಹ ಆ ಬೆಟ್ಟದ ಮೇಲೆ ಕಾಮಾಕ್ಯ ದೇವಿಯ ಮೂರ್ತಿ ಇದೆ. ಅಲ್ಲಿಯೂ ಭಕ್ತರ ಸಾಲು. ವಿಶೇಷ ಏನೆಂದರೆ ಅಲ್ಲಿ ಸ್ಥಳೀಯ ಪೊಲೀಸರು ಇರಲಿಲ್ಲ; ಇದ್ದುದು ಶಸ್ತ್ರಸನ್ನದ್ಧ ಸೈನಿಕರು.

ಪುರಾಣದ ಪ್ರಕಾರ ದಕ್ಷಬ್ರಹ್ಮನ ಯಜ್ಞದಲ್ಲಿ ಅಗ್ನಿ ಪ್ರವೇಶ ಮಾಡಿದ ದಾಕ್ಷಾಯಿಣಿಯ ದೇಹವನ್ನು ಶಿವನು ತೆಗೆದುಕೊಂಡು ಹೋಗುತ್ತಿದ್ದಾಗ, ದೇವಿಯ ದೇಹ ಚೂರಾಯಿತು. ಚೂರಾದ ದೇಹದ ಯೋನಿಯ ಭಾಗವು ಇಲ್ಲಿ ಬಿದ್ದಿದ್ದು, ಯೋನಿಯ ರೂಪದಲ್ಲಿ ಕಾಮಾಕ್ಯದೇವಿ ಪೂಜೆಗೊಳಗಾಗುತ್ತಿದ್ದಾಳೆ.

ಗುವಾಹಟಿಯ ತುಂಬಾ ದೇವಸ್ಥಾನಗಳೇ ತುಂಬಿವೆ. ಈಶಾನ್ಯ ರಾಜ್ಯವಾದ ಅಸ್ಸಾಂ ಅನ್ನು ದೇವಸ್ಥಾನಗಳ ನಗರ ಎನ್ನಬಹುದು. ರಾವಣನಿಗೂ ಇಲ್ಲಿ ಮಂದಿರವಿದೆ. ಮಹಾಭಾರತದ ಸಮಯದಲ್ಲಿ ಪಾಂಡವರು ವನವಾಸದಲ್ಲಿದ್ದಾಗ ಇಲ್ಲಿ ಪೂಜಿಸಿದ ಲಿಂಗವನ್ನು 'ಪಾಂಡುಲಿಂಗ'ವೆಂದು ಜನ ಪೂಜಿಸುತ್ತಾರೆ.



ಗೌಹಾತಿ ನಗರದ ಜೀವನಾಡಿ ಬ್ರಹ್ಮಪುತ್ರ ನದಿ



ಅಸ್ಸಾಂನ ರಾಜಧಾನಿ ಗುವಾಹಟಿಯ ಇರುಳು ನೋಟ

ಬೆಂಗಳೂರಿನ ವಾಹನದಟ್ಟಣೆಯಂತೆಯೇ ಗುವಾಹಟಿ ನಗರದಲ್ಲೂ ದಟ್ಟಣೆಯಿದೆ. ಕಿರಿದಾದ ರಸ್ತೆಗಳು, ಬೆಟ್ಟದ ದಾರಿಗಳು ನಗರವನ್ನು ರೂಪಿಸಿವೆ. ಚೆಂಡು ಹೂವು ಇಲ್ಲಿನ ಸಕಲ ಪುಣ್ಯಕಾರ್ಯಗಳಿಗೂ ಬಳಕೆಯಾಗುವ ಹೂವು. ನಾವು ಚೆಂಡು ಹೂವನ್ನು ನಮ್ಮ ದಕ್ಷಿಣಭಾಗದಲ್ಲಿ ಅಶುಭ ಎಂದು ಪರಿಗಣಿಸಿದರೆ, ಅಲ್ಲಿ ಚೆಂಡು ಹೂವು ದೇವರ ಮುಡಿಗೇರುವ ಪುಷ್ಪ.

ಬಸ್ಸಿನಲ್ಲಿ ನಮ್ಮ ಕನ್ನಡ ಮಾತನ್ನು ಕೇಳಿಸಿಕೊಂಡ ಯುವತಿಯೊಬ್ಬಳು, 'ನಾನು ಬೆಂಗಳೂರಿನ ಕೆ.ಆರ್.ಪುರದಲ್ಲಿ ಓದಿದವಳು' ಎಂದು ಹಿಂದಿಯಲ್ಲಿ ಮಾತನಾಡಿ, 'ಯಾವುದೇ ತೊಂದರೆಯಾದ ಪಕ್ಷದಲ್ಲಿ ನನಗೆ ಕರೆಮಾಡಿ' ಎಂದು ತನ್ನ ವಿಸಿಟಿಂಗ್ ಕಾರ್ಡ್ ಕೊಟ್ಟಳು. ಕನ್ನಡದ ನೀರನ್ನು ಕುಡಿದ ಅವಳ ಪ್ರೀತಿ, ನನಗೆ ಕನ್ನಡದ ಬಗೆಗೆ ಹಿಗ್ಗುವಂತೆ ಮಾಡಿತು.

ಕಾವ್ಯಕ್ಕೆ ಮನಸ್ಸುಗಳನ್ನು ಬೆಸೆಯುವ ಶಕ್ತಿಯಿದೆ. ನದಿಗೆ ಕೂಡ ಕಾವ್ಯದಂತೆ ಬದುಕುಗಳನ್ನು ಪೊರೆಯುವ ಅಮೃತಶಕ್ತಿಯಿದೆ. ಕಾವ್ಯದ ಹರಿಯುವಿಕೆಯ ಭಾಷೆಗಳು ಬದಲಾದರೂ ಕಾವ್ಯದ ಒಳಗಿನ ಧ್ವನಿ ಮಾತ್ರ ಭಾರತದ ಅಸ್ಮಿತೆಯಾಗಿ ಉಳಿದಿದೆ ಎನ್ನುವುದು ಗುವಾಹಟಿಯ ಭೇಟಿಯಲ್ಲಿ ಮತ್ತಷ್ಟು ಸ್ಪಷ್ಟವಾಯಿತು. ಕಾವ್ಯದ ಬಹುತ್ವ ಹಾಗೂ ಭಾರತದ ಬಹುತ್ವದ ರೂಪಕವಾಗಿ ಅಸ್ಸಾಂ ಭೇಟಿ ಪರಿಣಮಿಸಿತು.